ಆಗ್ತಿರ್ತದೋ...

★★★

'ಅಪ್ಪಾ...'

'ಏನಪಾ?'

'ಪಾಸ್‌ಪೋರ್ಟ್ ಆಫೀಸಿಂದ ನನ್ನ ಅಪ್ಲಿಕೇಷನ್ ರಿಜೆಕ್ಟ್ ಆಗಿ ಬಂದದ.'

'ಯಾಕಂತ?'

'ಬರ್ತಡೇ ಸರ್ಟಿಫಿಕೇಟ್ ಒರಿಜನಲ್ ಕಳಿಸಬೇಕಂತೆ.'

'ಯಾಕ... ಒರಿಜಿನಲ್ ಇಲ್ಲೇನು?'

'ಇಲ್ಲ...'

'ಆತು ಬಿಡು ನೋಡೋಣ.'

'ನೋಡೋಣು ಅಲ್ಲ. ಬೇಕೇ ಬೇಕು.'

'ತರೂಣಂತ ಬಿಡು.'

ಮಗ ಅಸಮಾಧಾನದಿಂದ ಹೋದಮ್ಯಾಲ ಈಗೇನು ಮಾಡೋದೂ? ಎಂಬ ಚಿಂತೆ ಶರಣಪ್ಪನಿಗೆ ಎದುರಾತು. ಈ ಕೆಲಸ ಆಗಬೇಕು ಅಂದ್ರ ಯಾರನ್ನಾರೇ ಹಿಡೀಲಿಕ್ಕೇ ಬೇಕು– ಯಾರು ಅಂಥವರು? ಎಂದು ತಲಾಷ್ ಮಾಡುವಾಗ ತನ್ನ ಆಫೀಸಿನಲ್ಲಿಯೇ ಯಾರಾದರೂ ಎಂದೊಂದು ಅಸ್ಪಷ್ಟ ಪರಿಹಾರ ಕಾಣದಿರಲಿಲ್ಲ. ತಾನು ವಾಲೆಂಟರಿ ರಿಟೈರ್‌ಮೆಂಟ್ ತೊಗೊಂಡಾದ ಮ್ಯಾಲ ಈ ಆರು ವರ್ಷಗಳಲ್ಲಿ ನಾಕಾರು ಸರ್ತಿ ಆಫೀಸಿನ ಕಡೆ ಕಾಲು ಹಾಕಿರಬೇಕು ಅಪ್ಪs. ಈ ಅವಧಿಯಲ್ಲಿ ತನ್ನ ಜೋಡಿ ಇದ್ದವರಲ್ಲಿ ಹಲವರಿಗೆ ಟ್ರಾನ್ಸ್‌ಫರ್ ಆಗ್ಯದ. ಒಂದಿಬ್ಬರಿಗೆ ನಿವೃತ್ತಿ ಆಗ್ಯದ. ತನಗ ಊರು ಬಿಡಲು ಮನಸ್ಸು ಇಲ್ಲದ್ದಕ್ಕ ಪ್ರಮೋಷನ್ ತಿರಸ್ಕಾರ ಮಾಡಿದ್ದರಿಂದ ಮನಿವಳಗಿನ ವಾತಾವರಣ ಒಂದಷ್ಟು ದಿವಸ ಹದಗೆಟ್ಟು ಹೋಗಿತ್ತಲ್ಲ, ಆಫೀಸಿನ ಮಂದಿ ಸುದ್ಧಾ ತಾನು ತೊಲಗುವುದನ್ನು ಬಯಸಿದ್ದರು. ಕೊನೆಗೆ ಇದು ವಾಲೆಂಟರಿಯಲ್ಲಿ ಪರ್ಯಾವಸಾನಗೊಂಡಿತ್ತು.

ಈಗ ಆಫೀಸು ಮೊದಲಿಗಿಂಥ ಭಾಳ ಸುಧಾರಣೆ ಆಗೇದ. ಬಿಲ್ಡಿಂಗ್ ನವೀಕರಣಗೊಂಡದ. ಎಲ್ಲ ದಾಖಲೆಗಳೂ ಕಂಪ್ಯೂಟರ್‌ವಳಗ ಹೋಗಿ ಕೂತಾವ. ಹೊಸ ಹೊಸ ಫರ್ನಿಚರುಗಳು, ತಲಿ ತಿರುಗಿಸುವ ಕುಷನ್ ಕುರ್ಚಿಗಳು, ತಾನಿನ್ನೂ ಕೈಯಾಡಿಸಲು ಅಂಜುವ ಕಂಪ್ಯೂಟರುಗಳು, ಏಸಿ ಬ್ಯಾರೆ! ಗಂಡಸರಿಗಿಂತ ಹೆಣ್ಣುಮಕ್ಕಳೇ ಆಫೀಸೊಳಗ ತುಂಬಿ ಹೋಗ್ಯಾರ. ಸಿ.ಸಿ. ಟೀವಿ ಕ್ಯಾಮರಾ ಸುದ್ದಾ ಅಳವಡಿಸ್ಯಾರಂತ. ಪಬ್ಲಿಕ್ ಮಂದಿ ಜೋಡಿ ಎಲ್ಲಾ ವ್ಯವಹಾರ ಪಾರದರ್ಶಕವಾಗಿ ನಡೆದದ ಅಂತ ದತ್ತು ಹೇಳಿದ್ದು ಕೇಳಿ ಇದೆಲ್ಲ ಪರಿವರ್ತನೆ ತನ್ನ ಕಾಲಾವಧಿಯಲ್ಲಿ ಆಗಬಾರದಿತ್ತೇ ಎಂದೀಗ ಶರಣಪ್ಪನಿಗೆ ಹಳಹಳಿ.

ಅಂದಹಾಗೆ ದತ್ತೂನ ಹಿಡಿದರೆ ಮಗನ ಕೆಲಸ ಆದ ಹಾಂಗ ಎಂಬ ಬಗ್ಗೆ ಶರಣಪ್ಪ ಈಗ ನಿಶ್ಚಿಂತನಾದ.

ತನಗಿಂತ ಹತ್ತು ವರ್ಷ ಜೂನಿಯರ್ ಆಗಿದ್ದ ದತ್ತು, ಸಾಹೇಬರ ಸ್ಟೀಲ್ ಚಮಚಾ ಎಂದೇ ಆಫೀಸಿನ ಪರಿಸರದಲ್ಲಿ ಗುರುತಿಸಿಕೊಂಡಾಂವ. ಹಾಂಗ ಯಾರಾದರೂ ವ್ಯಂಗ್ಯವಾಡಿದರೆ ಸುದ್ಧಾ ಅದು ತನ್ನ ಅರ್ಹತೆ ಎಂದೇ ಅವನು ಬೀಗುತ್ತಿದ್ದ. ಅವನ ಸೇವಾ ತತ್ಪರತೆ ಮಾತ್ರ ಮೆಚ್ಚುವ ಹಾಗಿತ್ತು. ಯಾರು ಏನೇ ಕೆಲಸ ಹೇಳಲಿ, ಚಾ ಹೇಳಿ ಬರುವುದರಿಂದ ಹಿಡಿದು ಲಕ್ಷ ರೂಪಾಯಿ ಸಾಲ ಕೊಡಿಸುವ ತನಕ ಅವನ ಕಬಂಧಬಾಹು ಚಾಚಿತ್ತು. ತಾನಿಲ್ಲದೆ ಆಫೀಸಿನ ಒಂದು ಕಾಗದವೂ